ಶ್ರೀಮತಿ ಲೀಲಾವತಿ ವೆಂಕಟೇಶ್ ಮಾಗಡಿ.—ಆಗಿನ ಕಾಲಕ್ಕೆ ಒಳ್ಳೆಯ ಕಂಡೀಷನ್ನಿನಲ್ಲಿತ್ತು. ಆಗ ಕೇವಲ ಒಂಬತ್ತು ಡಿಸ್ಪೆನ್ಸರಿಗಳಿದ್ದುವು. ಸ್ಪೇಟ್‌ನಲ್ಲಿ ತಿರುಗಾಡುವುದಕ್ಕೆ ಸಾಕು ಎನ್ನುವ ದೃಷ್ಟಿಯಿಂದ ಈ ಪ್ಯಾನ್ ಕೊಟ್ಟಿತು.

Allotment of Sites for constructing Houses in the Villages of Yelandur Taluk.

*Q.—387. Smt. KEMPAMMA (Kollegal).—

Will the Government be pleased to state :—

(*a*) the number of applications received for allotment of sites for constructing houses in the villages of Yelandur Taluk ;

(*b*) the period that has elapsed since such applications were received by them ;

(*c*) the reasons for not acquiring land so far ;

(*d*) if already acquired, the names of villages wherein lands have been acquired ?

A.—Sri N. RACHIAH (Minister for Social Welfare, Excise and Prohibition)–

(*a*) Eleven.

(*b*) Four applications for the year 1955-56.

Two for the year 1956-57.
Three for the year 1957-58.
Two for the year 1958-59.

(*c*) In 4 cases, lands have been acquired. In the other seven cases, proposals for acquisition have not been finalised.

(*d*) (1) Avalkandahalli, (2) Yelandur, (3) Shivakalli and (4) Honnur.

ಶ್ರೀಮತಿ ಕೆಂಪಮ್ಮ.—ಈ ಹನ್ನೊಂದು ಊರುಗಳ ಹೆಸರುಗಳನ್ನು ತಿಳಿಸುತ್ತೀರಾ ?

ಶ್ರೀ ಎನ್. ರಾಚಯ್ಯ.—ಅವಲಕಂಡಹಳ್ಳಿ, ಯಳಂದೂರು, ಶಿವಕಳ್ಳಿ, ಹೊನ್ನೂರು, ಬೀಚಹಳ್ಳಿ, ಯರ್ಗಂಬಳ್ಳಿ, ಅಗರಮಂಬಳ್ಳಿ, ಗೊಂಡಹಳ್ಳಿ, ಮದ್ದೂರು, ಯರಿಯೂರು.

ಶ್ರೀಮತಿ ಕೆಂಪಮ್ಮ.—ಈ 11 ಅರ್ಜಿಗಳು ಬಂದ ಮೇಲೆ ಮಂಜೂರು ಮಾಡಲು ಎಷ್ಟುದಿವಸಗಳು ಬೇಕಾದುವು ?

ಶ್ರೀ ಎನ್. ರಾಚಯ್ಯ.—ಈಗಾಗಲೇ ನಾಲ್ಕು ಗ್ರಾಮಗಳಲ್ಲಿ ಸರ್ಕಾರದವರು ಮಂಜೂರು ಮಾಡಿದ್ದಾರೆ. ಈ ಸೈಟುಗಳನ್ನು ಜಾಗ್ರತೆ ಕೊಡಬೇಕೆಂದು ಸರ್ಕಾರ ಆಜ್ಞೆ ಮಾಡಿದೆ. ಉಳಿದ ಏಳು ಗ್ರಾಮಗಳ ನಡೆವಳಿಕೆ ಮುಂದುವರೆದಿದೆ. ಸ್ಥಳಗಳನ್ನು ಅಕ್ವಯರ್ ಮಾಡುವ ರೀತಿಯಲ್ಲಿ ಸರ್ಕಾರ ಆಜ್ಞೆ ಮಾಡಿದೆ. ಉಳಿದುವುಗಳಲ್ಲಿ ರೆಕಾರ್ಡನ್ನು ಜಾಗ್ರತೆ ಮಾಡಿ ಕಳುಹಿಸಬೇಕೆಂದು ಡೆಪ್ಯುಟಕಮಿಶನರನ್ನು ಕೇಳಿದ್ದೇವೆ ಜಾಗ್ರತೆಯಾಗಿ ಮಾಡುತ್ತಾರೆ.

ಶ್ರೀಮತಿ ಕೆಂಪಮ್ಮ.—ಈ ನಾಲ್ಕು ಊರುಗಳಲ್ಲಿ ಎಷ್ಟು ಮನೆಗಳಿಗೆ ಅಕ್ಯೂಯರ್ ಮಾಡಿದ್ದೀರಿ ?

†ಶ್ರೀ ಎನ್. ರಾಚಯ್ಯ.—ಪ್ರತಿಯೊಂದು ಊರಿನಲ್ಲಿಯೂ ಎಷ್ಟು ವಸತಿ ಬೇಕಾಗಿದೆಯೋ ಅಷ್ಟಕ್ಕೆ ಸೈಟುಗಳನ್ನು ಅಕ್ವೈರ್ ಮಾಡಿದ್ದೇವೆ ; ಹೆಚ್ಚಾಗಿ ವಸತಿಗೋಸ್ಕರವಾಗಿ ಮಾಡಿದ್ದೇವೆ.

ಶ್ರೀ ಎಸ್. ಆರ್. ರಾಮಯ್ಯ.—ಆ ಸೈಟುಗಳನ್ನು ಅಕ್ವೈರು ಮಾಡುವುದರಲ್ಲಿ ನಿಧಾನವಾಗಿರುವುದರಿಂದ ಜನಗಳು ತೊಂದರೆಗೆ ಒಳಗಾಗಿದ್ದಾರೆ. ಅವುಗಳನ್ನು ಅಕ್ವೈಯರ್ ಮಾಡಲಕ್ಕೆ ಏನೇನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಎನ್. ರಾಚಯ್ಯ.—ಮಾನ್ಯ ಸದಸ್ಯರಿಗೆ ಗೊತ್ತಿದ್ದ ಹಾಗೆ ಮೇಲ್ಮನೆಯಲ್ಲಿ ಅಕ್ವಿಜಿಸನ್ ವಿಚಾರದಲ್ಲಿ ಈಗಾಗಲೇ ಒಂದು ಮಸೂದೆಯನ್ನು ಮಂಡಿಸಿದ್ದೇವೆ. ಅಕ್ವಿಜಿಷನ್ನನ್ನು ಅದಷ್ಟು ಜಾಗ್ರತೆಮಾಡಬೇಕೆಂಬ ಉದ್ದೇಶದಿಂದ ಈ ಕಾನೂನನ್ನು ಬದಲಾವಣೆ ಮಾಡುತ್ತಿದ್ದೇವೆ. ಈಗಿರುವ ಕಾನೂನಿನ ಪ್ರಕಾರ, ಸೆಕ್ಷನ್ 17ನ್ನು ಉಪಯೋಗಿಸಿದರೆ ಜಾಗ್ರತೆ ಅಕ್ವೈರ್ ಮಾಡಬಹುದು. ಅದರೆ ಹೈಕೋರ್ಟಿನವರು ಈ ಸೆಕ್ಷನ್ನನ್ನು ಸಾಧ್ಯವಾದಷ್ಟು ಕಡಮೆಯಾಗಿ ಜಾರಿಗೆ ತರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಆದುದರಿಂದ ಈ ಕಾನೂನನ್ನು ಬದಲಾಯಿಸ ಬೇಕಾಗಿದೆ. ಇದನ್ನು ಬದಲಾಯಿಸಿದ ಮೇಲೆ ಈ ಕೆಲಸ ಶೀಘ್ರವಾಗಿ ಆಗುತ್ತದೆ.

Hallas on Shimoga-Davangere Road.

*Q.—477. Sri KUNDUR RUDRAPPA (Channagiri).—

Will the Government be pleased to state :—

(*a*) the number of stage carriages plying between Shimoga and Davangere and *vice-versa via* Chilur, Honnali, Basavapatna, Kundur and Malebennur;

(*b*) the number of hallas existing on this road and where they are situated ?

A.—Sri B. D. JATTI (Chief Minister).–

(*a*) 5 (Five).

(*b*) There are two hallas between Honnali and Basavapatna and two hallas between Basavapatna and Kundur.

† Indicates that the remarks or speeches have not been revised by the member concerned.